# ಕರ್ನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ

**ತಾರಾ ಬಿ.ಎಸ್.[1] & ಸುವರ್ಣಾ ಹೂಗಾರ[2]**

[1]ಮುಖ್ಯಸ್ಥರು, ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.

[2]ಉಪನ್ಯಾಸಕರು, ಕೆ.ಎಲ್.ಇ. ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.

DOI: https://doi.org/10.5281/zenodo.17411871

## ABSTRACT:

ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಕನ್ನಡ ನಾಡು ನುಡಿ ಕಟ್ಟುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ, ಇತಿಹಾಸದ ಪುಟಗಳಲ್ಲಿ ಮಹಿಳೆಯರು ಚಳುವಳಿಯ ಅಪರೂಪದ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು ಎಷ್ಟೋ ಮಹಿಳಾ ಸಾಧಕಿಯರು ಇತಿಹಾಸದ ಪುಟಗಳಿಂದ ಕಣ್ಮರೆಯಾಗಿದ್ದಾರೆ, ದೇಶಕ್ಕಾಗಿ, ರಾಜ್ಯಕ್ಕಾಗಿ ತ್ಯಾಗ ಬಲಿದಾನಗಳನ್ನು ಮಾಡಿ ಅಜರಾಮರರಾಗಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಸಂಸ್ಥಾನಗಳು, ಮೊಘಲ್, ಬ್ರಿಟೀಷರ ವಿರುದ್ಧ ಹೋರಾಡಿ ಅವರನ್ನು ಹಿಮ್ಮೆಟ್ಟಿಸಿದ ಅನೇಕ ವೀರ ಮಹಿಳೆಯರ ಚರಿತ್ರೆಯನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಪುರುಷರಷ್ಟೇ ಸಾಮರ್ಥ್ಯ ಹೊಂದಿದ ಮಹಿಳೆಯರು ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಪೋಲೀಸರ ಲಾಠಿ ಏಟು ತಿಂದು ಸೆರೆಮನೆಯ ವಾಸವನ್ನೂ ಅನುಭವಿಸಿದ್ದು ಉಲ್ಲೇಖನಾರ್ಹ. ಅದರಲ್ಲಿ ರಾಣಿ ಅಬ್ಬಕ್ಕ, ರಾಣಿ ಚನ್ನಮ್ಮ, ಉಮಾಬಾಯಿ ಕುಂದಾಪುರ, ಕಮಲಾದೇವಿ ಚಟ್ಟೋಪಾಧ್ಯಾಯ, ಶ್ರೀಮತಿ ನಾಗಮ್ಮ ವೀರನಗೌಡ ಪಾಟೀಲ, ಈ ಮುಂತಾದ ಕೆಲ ಮಹಿಳೆಯರ ಹೋರಾಟವನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ,

## KEYWORDS:

ಕರ್ನಾಟಕ, ಸ್ವಾತಂತ್ರ್ಯ ಚಳುವಳಿ, ಹೋರಾಟ, ಮಹಿಳಾ, ಸಾಧಕಿಯರು.

ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಕನ್ನಡ ನಾಡು ನುಡಿ ಕಟ್ಟುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ, ಇತಿಹಾಸದ ಪುಟಗಳಲ್ಲಿ ಮಹಿಳೆಯರು ಚಳುವಳಿಯ ಅಪರೂಪದ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು ಎಷ್ಟೋ ಮಹಿಳಾ ಸಾಧಕಿಯರು ಇತಿಹಾಸದ ಪುಟಗಳಿಂದ ಕಣ್ಮರೆಯಾಗಿದ್ದಾರೆ, ದೇಶಕ್ಕಾಗಿ, ರಾಜ್ಯಕ್ಕಾಗಿ ತ್ಯಾಗ ಬಲಿದಾನಗಳನ್ನು ಮಾಡಿ ಅಜರಾಮರರಾಗಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಸಂಸ್ಥಾನಗಳು, ಮೊಘಲ್, ಬ್ರಿಟೀಷರ ವಿರುದ್ಧ ಹೋರಾಡಿ ಅವರನ್ನು ಹಿಮ್ಮೆಟ್ಟಿಸಿದ ಅನೇಕ ವೀರ ಮಹಿಳೆಯರ ಚರಿತ್ರೆಯನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಪುರುಷರಷ್ಟೇ ಸಾಮರ್ಥ್ಯ ಹೊಂದಿದ ಮಹಿಳೆಯರು ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಪೋಲೀಸರ ಲಾಠಿ ಏಟು ತಿಂದು ಸೆರೆಮನೆಯ ವಾಸವನ್ನೂ ಅನುಭವಿಸಿದ್ದು ಉಲ್ಲೇಖನಾರ್ಹ. ಅದರಲ್ಲಿ ರಾಣಿ ಅಬ್ಬಕ್ಕ, ರಾಣಿ ಚನ್ನಮ್ಮ, ಉಮಾಬಾಯಿ ಕುಂದಾಪುರ, ಕಮಲಾದೇವಿ ಚಟ್ಟೋಪಾಧ್ಯಾಯರು ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಮಹಿಳೆಯರ ಪಾತ್ರ ಮತ್ತು ಹೋರಾಟವನ್ನು ಇಲ್ಲಿ ಪ್ರಮುಖವಾಗಿದೆ. ಪುರುಷರಿಗಿಂತಲೂ ಹೆಚ್ಚು ಸಾಧನೆ ಮಾಡಿದ್ದಾರೆ, ಅವರು ಕೇವಲ ಗೃಹ ಕೃತ್ಯಗಳಿಗೆ ಸೀಮಿತವಾಗಿರದೇ ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿಯೂ ಭಾಗವಹಿಸಿದ್ದರು. ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಕ್ಷೇತ್ರಗಳಲ್ಲಿಯೂ ಕೊಡುಗೆಗಳನ್ನು ನೀಡಿದ್ದಾರೆ.

**ಪ್ರಮುಖ ಮಹಿಳಾ ಹೋರಾಟಗಾರರು:**

**ಕಿತ್ತೂರು ರಾಣಿ ಚೆನ್ನಮ್ಮ:**

ಕಾಕತೀಯ ಕುವರಿ ಕಿತ್ತೂರು ರಾಣಿ ಚೆನ್ನಮ್ಮ ಕಿತ್ತೂರು ದೇಶಗತಿಯಲ್ಲಿ ಆಡಳಿತ ಮಾಡಿದ ಪ್ರಮುಖ ರಾಣಿಯಾಗಿದ್ದಳು. ಬ್ರಿಟೀಷರ ವಿರುದ್ಧ ಹೋರಾಟ ಮಾಡಿದ ಮತ್ತು ದತ್ತುಪುತ್ರರಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಪ್ರಶ್ನೆ ಮಾಡಿ ಪ್ರಬಲ ಹೋರಾಟ ಮಾಡಿದ ವೀರ ಮಹಿಳೆ. ಥ್ಯಾಕರೆನ ಅವಸರಕ್ಕೆ ಆಕ್ಷೇಪಣೆ ಮಾಡಿದ ಚೆನ್ನಮ್ಮ ದತ್ತು ಪ್ರಕ್ರಿಯೆ ಕಿತ್ತೂರು ದೇಶಗತಿಯ ಹಕ್ಕು ಇದಕ್ಕೆ ಆಂಗ್ಲರ ಅನುಮತಿ ಅನಾವಶ್ಯಕ ಎಂದು ಪ್ರಬಲ ಹೋರಾಟ ಮಾಡಿದಳು. ಶಕ 1824 ಅಕ್ಟೋಬರ 23 ಕರ್ನಾಟಕ ಇತಿಹಾಸದಲ್ಲಿಯೇ ವಿಶೇಷ ದಿನವಾಗಿತ್ತು. ರಾಣಿ ಚನ್ನಮ್ಮಳ ಸಹನೆ ಮೀರಿತು. ತನ್ನ 5000 ಸೈನ್ಯ ಕೊಲ್ಲಾಪುರದ ಛತ್ರಪತಿಗಳ ಮತ್ತು ವಿವಿಧ ದೇಶಗತಿಗಳ ಸಹಾಯ ಸಹಕಾರದೊಂದಿಗೆ ಸಂಗೊಳ್ಳಿ ರಾಯಣ್ಣ, ಅಮಟೂರು ಬಾಳಪ್ಪ, ಬಿಚ್ಚುಗತ್ತಿ ಚೆನ್ನಪ್ಪ, ಗಜವೀರ, ವೀರಭದ್ರ ಮುಂತಾದ ಕಟ್ಟಾ ಸ್ವಾಮಿ ಭಕ್ತರ ಪಡೆಯೊಂದಿಗೆ ಯುದ್ಧಕ್ಕೆ ಸಿದ್ಧಳಾದಳು. ಅಮಟೂರು ಬಾಳಪ್ಪನ ಗುಂಡೇಟಿಗೆ ಜಾನ ಥ್ಯಾಕರೆ ಬಲಿಯಾದನು, 1824 ಅಕ್ಟೋಬರ 23 ರಂದು ನಡೆದ ಕಾಳಗದಲ್ಲಿ ಬ್ರಿಟೀಷ ಸೈನ್ಯ ಸೋಲನ್ನು ಅನುಭವಿಸಿತು, ಆದರೆ ಮತ್ತೊಮ್ಮೆ 1824 ನವೆಂಬರ 30 ರಂದು ಯುದ್ಧ ಆರಂಭವಾಯಿತು. ಈ ಯುದ್ಧದಲ್ಲಿ ಚನ್ನಮ್ಮ ಸೋತು ಸೆರೆಮನೆ ಸೇರಬೇಕಾಯಿತು, 1829 ಫೆಬ್ರುವರಿ 2 ರಂದು ಬೈಲಹೊಂಗಲದ ಗೃಹಬಂಧನದಲ್ಲಿ ನಿಧನರಾದರು,

**ಶ್ರೀಮತಿ ನಾಗಮ್ಮ ವೀರನಗೌಡ ಪಾಟೀಲ:**

1905 ಡಿಸೆಂಬರ 16 ರಂದು ಜನಿಸಿದ ಹುಬ್ಬಳ್ಳಿಯ ಶ್ರೀಮತಿ ನಾಗಮ್ಮ ವೀರನಗೌಡ ಪಾಟೀಲ ಅವರು ಮಹಾತ್ಮಾ ಗಾಂಧೀಜಿಯವರ ಕರೆಯ ಮೇರೆಗೆ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. 1934 ರಲ್ಲಿ ಹರಿಜನ ಬಾಲಿಕಾ ಆಶ್ರಮ ಎಂಬ ವಿದ್ಯಾರ್ಥಿನಿಯರ ವಸತಿ ನಿಲಯವನ್ನು ಆರಂಭಿಸಿದರು, ಇಡೀ ದೇಶದಲ್ಲಿ ದ್ವಿತೀಯ ಮತ್ತು

ರಾಜ್ಯದ ಪ್ರಥಮ ಸ್ಥಾನದ ಆಶ್ರಮವಾಗಿತ್ತು. ಇದು ಸಾಬರಮತಿಯ ಆಶ್ರಮದಂತೆ ಕಾರ್ಯ ನಿರ್ವಹಿಸುತ್ತಿತ್ತು, ಈ ಆಶ್ರಮಕ್ಕೆ ಕಸ್ತೂರಬಾ ಬಾಲಿಕಾ ಆಶ್ರಮವೆಂದು ಮರು ನಾಮಕರಣ ಮಾಡಲಾಯಿತು, 1937ರಲ್ಲಿ ಬ್ಯಾಡಗಿಯಲ್ಲಿ 2 ನೇಯ ಬಾಲಿಕಾ ಆಶ್ರಮ ಆರಂಭಿಸಿದರು, ಬ್ರಿಟೀಷ ಸರಕಾರದ ವಿರುದ್ಧದ ಚಟುವಟಿಕೆಗಳ ಕೇಂದ್ರ ಸ್ಥಳವನ್ನಾಗಿ ಮಾಡಿಕೊಳ್ಳಲಾಯಿತು, ಈ ಕಾರ್ಯದಲ್ಲಿ ಶ್ರೀಮತಿ ನಾಗಮ್ಮ ವೀರನಗೌಡ ಪಾಟೀಲ ಅವರ ಕಾರ್ಯ ಶ್ಲಾಘನೀಯವಾಗಿದೆ. ಕಸ್ತೂರಬಾ ನಿಧಿ ಸಂಗ್ರಹ ಕಾರ್ಯ, ಸಮಾಜಮುಖಿ, ಕೃಷಿ ಅಪರೂಪದ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. 2002 ರಲ್ಲಿ ವಯೋ ಸಹಜ ಕಾಯಿಲೆಯಿಂದಾಗಿ ಮರಣ ಹೊಂದಿದರು.

**ಉಮಾಬಾಯಿ ಕುಂದಾಪುರ:**

21/3/1892 ರಲ್ಲಿ ಗೋಲಿಕೆರೆಯಲ್ಲಿ ಜನಿಸಿದರು. ಇವರು ಅಂದಿನ ಕಾಲದಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸು ಮಾಡಿ ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಭಾಗವಹಿಸಿದರು. ರಾಷ್ಟ್ರ ನಾಯಕ ಬಾಲ ಗಂಗಾಧರ ತಿಲಕ್ ಅವರು ನಿಧನರಾದಾಗ ಅವರ ಅಂತಿಮ ಯಾತ್ರೆಯಲ್ಲಿ ಸೇರಿದ ಅಪಾರ ಜನಸ್ತೋಮ ಕಂಡು ಪ್ರಭಾವಿತರಾದ ಇವರು ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಭಾಗವಹಿಸಿದರು. 1923 ರಲ್ಲಿ ಹಿಂದುಸ್ಥಾನ ಸೇವಾದಳ ಸೇರಿಕೊಂಡು ನಂತರ ಅದರ ಮುಖ್ಯಸ್ಥೆಯಾಗಿ ಸೇವೆ ಸಲ್ಲಿಸಿದರು, ಕಾಂಗ್ರೆಸ್ ಸಂಘಟನೆಯ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿದರು. ಬೆಳಗಾವಿಯಲ್ಲಿ ನಡೆದ 1924ರ ಕಾಂಗ್ರೆಸ್ ಅಧಿವೇಶನದಲ್ಲಿ ಮಹಿಳಾ ಅಧಿಕಾರಿಯಾಗಿ ನೇಮಕಗೊಂಡಿದ್ದರು.. 1932ರಲ್ಲಿ ಬ್ರಿಟೀಷರ ಅಕ್ರಮ ಸಂಘಟನೆಗಳನ್ನು ನಿಷೇಧ ಮಾಡಿದರು. ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಭಾಗವಹಿಸಿದ ನಾಯಕರಿಗೆ ಆಶ್ರಯ ನೀಡಿದರು. 1992ರಲ್ಲಿ ಮರಣ ಹೊಂದಿದರು.

**ಶ್ರೀಮತಿ ಜಯದೇವಿ ತಾಯಿ ಲಿಗಾಡೆ:**

ಶ್ರೀಮತಿ ಜಯದೇವಿ ತಾಯಿ ಲಿಗಾಡೆಯವರು ಸೋಲಾಪುರದ ವಾರದ ಮಲ್ಲಪ್ಪನವರ ಮೊಮ್ಮಗಳಾಗಿದ್ದರು, ಕರ್ನಾಟಕದ ಏಕೀಕರಣ ಮತ್ತು ಸ್ವಾತಂತ್ರ್ಯ ಚಳುವಳಿಯ ಹೋರಾಟಗಾರ್ತಿಯಾದ ಇವರು ವಿವಿಧ ಸಂಘಟನೆಗಳ ಮೂಲಕ ಬ್ರಿಟೀಷರ ವಿರುದ್ಧ ಹೋರಾಟ ಮಾಡಿದ ಮಹಿಳೆ. ಬ್ರಿಟೀಷರ ದರ್ಪ ದೌರ್ಜನ್ಯಗಳನ್ನು ಧಿಕ್ಕರಿಸಿದರು.1934 ರಲ್ಲಿ ಸರಕಾರದ ಪ್ರತಿಬಂಧಕಾಜ್ಞೆ ಉಲ್ಲಂಘಿಸಿ ಪ್ರಭಾತಪೇರಿ ನಡೆಸಿದರು, 1947 ರಲ್ಲಿ ರಾಷ್ಟ್ರೀಯ ಸೇವಾದಳ ಸೇರಿ ಮಹಿಳಾ ಸಹಭಾಗಿತ್ವಕ್ಕಾಗಿ ಜಯನಿಕೇತನವನ್ನು ಕಟ್ಟಿ ಬೆಳೆಸಿದರು, ಹರಿಜನ ಕೇರಿಗಳಿಗೆ ಭೇಟಿ ನೀಡಿ ಜಾತಿ ಸಮಸ್ಯೆಗಳನ್ನು ನಿವಾರಣೆ ಮಾಡಿದರು. ಶರಣ ಸಮಾಜ ಸಂಘವನ್ನು ಕಟ್ಟಿದರು.

**ಕಮಲಾದೇವಿ ಚಟ್ಟೋಪಾಧ್ಯಾಯ:**

3/4/1903 ರಲ್ಲಿ ಮಂಗಳೂರಿನಲ್ಲಿ ಜನಿಸಿದ ಇವರು ಮಹಿಳಾ ಕಾಂಗ್ರೆಸ್ ವಿಭಾಗದಲ್ಲಿ ಸೇವೆ ಸಲ್ಲಿಸಿದರು. ಸ್ವದೇಶಿ ಮತ್ತು ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದ್ದರು, "Orange Brigade" (ಸೇವಾ ದಳ ಮಹಿಳಾ ಶಾಖೆಯಲ್ಲಿ ಕಾರ್ಯ ಮಾಡಿದರು. 29/10/1988 ರಲ್ಲಿ ಮರಣ ಹೊಂದಿದರು.

**ಶ್ರೀಮತಿ ಶಕುಂತಲಾ ಕುರ್ತಕೋಟಿ:**

ಸೈನ್ಯಾಧಿಕಾರಿಗಳ ಮಗಳಾದ ಶ್ರೀಮತಿ ಶಕುಂತಲಾ ಕುರ್ತಕೋಟಿಯವರು ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಮಹಿಳೆಯರ ಪರವಾಗಿ ಮುಖಂಡತ್ವ ವಹಿಸಿದ್ದರು. ಅಂದು ಈ ಮೆರವಣಿಗೆಯನ್ನು ನಿರ್ಬಂಧಿಸಲು ಸಾರ್ಜಂಟ ತನ್ನ ಮಿಲಿಟರಿಯನ್ನೇ ತಂದಿದ್ದ ಅದರ ಕಡೆಗೆ ಲಕ್ಷ್ಯವಹಿಸದೆ ತಮ್ಮ ಹೋರಾಟದ ಕಡೆಗೆ ಗಮನ ಹರಿಸಿದರು ಸಾರ್ಜಂಟ ಹೋರಾಟಗಾರರನ್ನು ಬಂಧಿಸಿದ. ಆದರೆ ಇವರು ಮಾತ್ರ ಕೈಯಲ್ಲಿರುವ ಧ್ವಜವನ್ನು ಬಿಟ್ಟಿರಲಿಲ್ಲಾ ಆಗ 118 ಕಾಲೇಜು ವಿದ್ಯಾರ್ಥಿಗಳು ಬಂಧನಕ್ಕೊಳಗಾದರು ಇದು ಇವರ ಪ್ರಥಮ ಬಂಧನವಾಯಿತು.

ಸೇವಾ ದಳದಲ್ಲಿ ಆಗ ಶಕುಂತಲಾರವರು ಮುಖ್ಯ ಸಂಘಟಕರಾಗಿದ್ದು 1000 ಹುಡುಗರು 1000 ಹೆಣ್ಣು ಮಕ್ಕಳಿದ್ದರು ಇವರ ಮೇಲೆ ಪೋಲೀಸರು ಕಾವಲು ಆರಂಭವಾಯಿತು. ಇದರ ಪರಿಣಾಮವಾಗಿ ಆಗಾಗ ಇವರ ಮನೆಯನ್ನು ಜಪ್ತಿ ಮಾಡುತ್ತಿದ್ದರು. ಆಗಲೇ ಇವರಿಗೆ ಮಹಾರಾಷ್ಟ್ರದ ಕಾರ್ಯಕರ್ತರ ಸಂಪರ್ಕವೂ ಬಂದಿತು. ಖಾದಿ ಪ್ರಚಾರ, ಹಿಂದಿ ಮತ್ತು ಚರಖಾ ವರ್ಗಗಳು ಆರಂಭವಾದವು. ಒಟ್ಟು ವಿದ್ಯಾರ್ಥಿಗಳಲ್ಲಿ ನಿರಂತರ ಮತ್ತು ಪರಸ್ಪರ ಸಂಪರ್ಕ ಬರುವಂತೆ ಅವರಲ್ಲಿಯ ಹುರುಪು ಹುಮ್ಮಸ್ಸು ಯಾವುದೇ ಪರಿಸ್ಥಿತಿಯಲ್ಲಿಯೂ ಕುಗ್ಗದಂತೆ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರು. ಇವರು ಬೆಂಗಳೂರು ಮೂಲದ ಸ್ವಾತಂತ್ರ್ಯ ಹೋರಾಟಗಾರ್ತಿ. ಅವರು ಗಾಂಧೀಜಿಯವರ ಜೊತೆಗೆ ಕೆಲಸ ಮಾಡಿದ್ದು, ಖಾದಿ ಉಳಿತಾಯ, ಸತ್ಯಾಗ್ರಹ ಹಾಗೂ ಮಹಿಳಾ ಶಿಕ್ಷಣ ಪ್ರಸಾರದಲ್ಲಿ ಮುಖ್ಯ ಪಾತ್ರವಹಿಸಿದ್ದರು.

**ಇಂದಿರಾ ಬೆನಕೆ:**

ಇವರು ಧಾರವಾಡ ಜಿಲ್ಲೆಯಲ್ಲಿ ಜನ್ಮ ಪಡೆದು ಮಹಿಳಾ ಹಕ್ಕುಗಳು ಮತ್ತು ಸ್ವಾತಂತ್ರ್ಯ ಚಳುವಳಿಗೆ ತಮ್ಮ ಶಕ್ತಿಯನ್ನೆಲ್ಲಾ ನೀಡಿದವರು. ಧಾರವಾಡ ಜಿಲ್ಲೆ ಸ್ವಾತಂತ್ರ್ಯ ಹೋರಾಟದಲ್ಲಿ ಮಹತ್ವಪೂರ್ಣ ಪಾತ್ರ ವಹಿಸಿದ ಜಿಲ್ಲೆಯಾಗಿದೆ. ಈ ಹೋರಾಟದಲ್ಲಿ ಮಹಿಳೆಯರ ಪಾತ್ರವೂ ಅತ್ಯಂತ ಗಮನಾರ್ಹವಾಗಿದೆ. ತಮ್ಮ ಬಾಳನ್ನು ಪಣಕ್ಕಿಟ್ಟು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರ ಮಹಿಳೆಯರು ಧಾರವಾಡ ಜಿಲ್ಲೆಯಲ್ಲೂ ಇದ್ದರು.

**ಸವಿತಾ ಹುಲ್ಲೂರ:**

ಧಾರವಾಡದ ಜಿಲ್ಲೆಯ ಪ್ರಮುಖ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ. ಗಾಂಧೀಜಿಯ ಅಹಿಂಸಾತ್ಮಕ ಹೋರಾಟದಿಂದ ಪ್ರಭಾವಿತರಾಗಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದರು. ಮನೆ ಮನೆಗೆ ತೆರಳಿ ಗಾಂಧೀಜಿಯವರ ಚಿಂತನೆಯನ್ನು ಹರಡಿದರು. ಮಹಿಳಾ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣಾದಾಯಿಯಾಗಿ, ಅನೇಕರಿಗೆ ಆದರ್ಶವಾಗಿದ್ದವರು. ದೇಶಭಕ್ತರೊಬ್ಬಳಾಗಿ ಸಮಾಜಸೇವೆಯಲ್ಲೂ ತೊಡಗಿದ್ದರು. ಅವರು ನಾಯಕತ್ವದಲ್ಲಿ ಮಹಿಳೆಯರು ಹೋರಾಟದಲ್ಲಿ ಭಾಗವಹಿಸಲು ಧೈರ್ಯವಿಟ್ಟುಕೊಂಡರು.

**ಅಂಬಾಬಾಯಿ ಮಹಾರಾಜ:**

ಧಾರವಾಡದ ಸ್ವಾತಂತ್ರ್ಯ ಹೋರಾಟದಲ್ಲಿ ಶ್ರದ್ಧೆ ಮತ್ತು ಧೈರ್ಯದ ಸಂಕೇತ. ಮಹಿಳೆಯರಲ್ಲಿ ರಾಜಕೀಯ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಧಾರವಾಡ

**ಪರಾಮರ್ಶನ ಗ್ರಂಥಗಳು:**


1. ಕಿತ್ತೂರು ಇತಿಹಾಸ ಶ್ರೀ ಜಿ ವಿ ಕೊಂಗವಾಡ. ಬೆಳಗಾವಿ ಪ್ರಕಟಣೆ 1998
2. ಸ್ವಾತಂತ್ರ್ಯ ಚಳುವಳಿಯ ಹಿರೋಗಳು, ಡಾ. ಬಾಬು ಕೃಷ್ಣಮೂರ್ತಿ ಸಾಹಿತ್ಯ ಪ್ರಕಾಶನ ಕೊಪ್ಪಿಕರ್ ಬೀದಿ ಹುಬ್ಬಳ್ಳಿ 2006.
3. ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು. ಡಾ ಸರೋಜಿನಿ ಚವಲಾರ ಶ್ರೀ ಜಗದ್ಗುರು ಧರ್ಮ ಪ್ರಚಾರಕ ಮಂಡಳಿ ಮೂರು ಸಾವಿರ ಮಠ, ಹುಬ್ಬಳ್ಳಿ 1988
4. ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು. ಸ್ವಾತಂತ್ರ್ಯ ಯೋಧರು ಮತ್ತು ಉತ್ತರಾಧಿಕಾರಿಗಳ ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ 1995 ಸಂಪಾದಕರು, ಪ್ರಕಾಶಕರು. ಕರ್ನಾಟಕ ರಾಜ್ಯ ಶ್ರೀಮತಿ ಸುಶೀಲಾ ಸುಬ್ರಮಣ್ಯ ಮತ್ತು ಸಂಪಾದಕ ಮಂಡಳಿ ಬೆಂಗಳೂರು.,
5. ಕರ್ನಾಟಕದ ಏಕೀಕರಣಕ್ಕೆ ದುಡಿದ ಮಹನೀಯರು ಸಂಪಾದಕರು ಮುಖ್ಯಮಂತ್ರಿ ಚಂದ್ರು ಪ್ರಕಟಣೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು., 2008.
6. ಸಚಿತ್ರ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಮತ್ತು ಗಾಂಧೀಜಿ, ಶ್ರೀ ಸೋಮಲಿಂಗ. ಅ, ಮಳಗಲಿ. ಮತ್ತು ಅಚ್ಯುತ ರಾ. ವಡವಿ. ಪ್ರಕಾಶಕರು ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವ ಸಂಘ ಬೆಳಗಾವಿ 2020.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.